**ಆರ್ ಡಬ್ಲೂ ಃ 2**

**ಸಾಕ್ಷಿಗೆ ದಿನಾಂಕಃ 07.08.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರರ ಪರಃ ಶ್ರೀ ವಕೀಲರ ಮೂಲಕ ಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಅಧಾರ ಕಾರ್ಡಿನ ನೋಟರಿಕೃತ ಪ್ರತಿಯನ್ನು ನಿ.ಆರ್ 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ವಕೀಲರಿಂದ ಃ**

ನಾನು ವಿದ್ಯಾ ಭ್ಯಾಸ ಮಾಡಿರುವುದಿಲ್ಲ. ನನ್ನ ಪತಿಯ ಹೆಸರು ಸಿದ್ದರಾಮು. ಅವರು ಮೃತರಾಗಿ 5 ವರುಷಗಳು ಅಗಿರುತ್ತದೆ. ಸದರಿಯವರು ಬಿ ಡಬ್ಲ್ಯೂ ಎಸ್ ಎಸ್ ಬಿ ಯಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಇಲಾಖೆಯಲ್ಲಿ ಯಾವ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿರುವುದಿಲ್ಲ, ನನಗೆ 3 ಜನ ಮಕ್ಕಳು. ಅವರುಗಳಂದರೆ ಕಿರಣ್ ಕುಮಾರ್ , ಶಿವಕುಮಾರ್ ಮತ್ತು ರಾಜೇಶ್. ಸದರಿ ರಾಜೇಶ ರವರು ಅಪಘಾತದಲ್ಲಿ ಮೃತರಾಗಿರುತ್ತಾರೆ. ನನ್ನ ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬರು ಆಟೋ ಚಾಲಕರಾಗಿದ್ದು ಮತ್ತೊಬ್ಬರು ಕೂಲಿ ಕೆಲಸ ಮಾಡುತ್ತಾ ರೆ. 1ನೇ ಅರ್ಜಿದಾರರು ನನ್ನ ಸೊಸೆ ಅಗಿರುತ್ತಾರೆ ನನ್ನ ಮೊಮ್ಮಗುವಿನ ಹೆಸರು ಗೊತ್ತಿರುವುದಿಲ್ಲ. ನನ್ನ ಪತಿಯು ಮೃತರಾದ ಸಂಬಂದವಾಗಿ ಸರ್ಕಾರದ ಸೌಲಭ್ಯಗಳು ಬಂದಿರುತ್ತದೆ ಎಂದರೆ ಸರಿ. ನನಗೆ ಪಿಂಚಣಿ ಬರುತ್ತಿದೆ ಎಂದರೆ ಸರಿ. ನಾನು ನನ್ನ ಇಬ್ಬರು ಮಕ್ಕಳು ಒಟ್ಟಾಗಿ ವಾಸವಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಕ್ಕಳು ಪ್ರತ್ಯೇಕವಾಗಿ ವಾಸವಿರುವ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನಗೆ ಪಿಂಚಣಿ 25 ಸಾವಿರ ರೂಪಾಯಿ ಬರುತ್ತದೆ. ನನ್ನ ಪತಿಯ ಕಡೆಯಿಂದ ನನಗೆ 1 ಎಕರೆ ಜಮೀನು ಬಂದಿರುತ್ತದೆ. ನನ್ನ ಪತಿಯು ಕಟ್ಟಿಸಿರುವ ಅರ್ ಸಿ ಸಿ ಮನೆಯಲ್ಲಿ ನಾನು ವಾಸವಿದ್ದೇನೆ ಎಂದರೆ ಸರಿ. ನನಗೆ ಜೀವನ ನಡೆಸಲು ತೊಂದರೆ ಇಲ್ಲ ಎಂದರೆ ಸರಿಯಲ್ಲ.

ನನ್ನ ಮಗನು ಮೃತನಾದ ಕಾಲಕ್ಕೆ 1ನೇ ಅರ್ಜಿದಾರರು ಗರ್ಬಿಣಿಯಾಗಿದ್ದರು ಎಂದರೆ ಸರಿ. ಅಪಘಾತವಾದ 2 – 3 ದಿನಗಳ ನಂತರ ನಾನು 1ನೇ ಅರ್ಜಿದಾರರನ್ನು ಮನೆಯಿಂದ ಹೊರಗಡೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ದಿನದಿಂದ ಇದೂವರೆವಿಗೆ 1ನೇ ಅರ್ಜಿದಾರರು ತನ್ನ ತಾಯಿ

ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ನಮ್ಮ ಕುಟುಂಬದ ಕಡೆಯಿಂದ ಯಾವುದೇ ಜೀವನಾಂಶವನ್ನು ನೀಡಿಲ್ಲ ಎಂದರೆ ಸರಿ. 1ನೇ ಅರ್ಜಿದಾರರ ತವರು ಮನೆಯವರು ಬಡವರು ಎಂದರೆ ಸರಿ. ನನಗೆ ಪಿಂಚಣಿ ಬರುವುದರಿಂದ ಮತ್ತು ಸ್ಥಿರ ಅಸ್ತಿಯನ್ನು ಹೊಂದಿರುವುದರಿಂದ ನಾನು ಪರಿಹಾರದ ಮೊತ್ತದಲ್ಲಿ ಸ್ವಲ್ಪವನ್ನು ಪಡೆಯಲು ಅರ್ಹಳು ಎಂದರೆ ಸರಿಯಲ್ಲ. ಅರ್ಜಿದಾರರು ಹೆಚ್ಚು ಮೊತ್ತವನ್ನು ಪಡೆಯಲು ಹಕ್ಕುದಾರರು ಎಂದರೆ, 2ನೇ ಅರ್ಜಿದಾರರಿಗೆ ಕೊಡಲು ತಯಾರು ಇರುತ್ತೇವೆ. ನನ್ನ ಪ್ರಮಾಣಪತ್ರದಲ್ಲಿ ಅರ್ಜಿದಾರರ ಬಗ್ಗೆ ಬರೆಸಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ಬರೆಸಿದರೆ ನಿಜಾಂಶ ಗೊತ್ತಾಗುತ್ತದೆ ಮತ್ತು ನನಗೆ ಕಡಿಮೆ ಪರಿಹಾರ ಮೊತ್ತ ಬರುತ್ತದೆ ಎಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರದ ಅರ್ಜಿಯನ್ನು ಸಲ್ಲಿಸುವಾಗ 1ನೇ ಅರ್ಜಿದಾರರು ನನ್ನನ್ನು ಕೇಳಿದ್ದರು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ ಎ ಸಿ ಟಿ, ಮಳವಳ್ಳಿ.